ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂಶಿನಿ 48 ಸಿಡಿಸಿ(1) 2013-14 /5217

ನಿರ್ದೇಶಕರ ಕಾರ್ಯಾಲಯ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 09-12-2013.

ಇವರಿಗೆ:

ಶ್ರೀ ಪ್ರಭಾಕರನ್ ಕೆ,
s/o ಕನಕರಾಜ್
#98, 7ನೇ ಮುಖ್ಯರಸ್ತೆ,
ಬಿ ನಾರಾಯಣಪುರ, ವೈಟ್‌ಫೀಲ್ಡ್ ರೋಡ್,
ಬೆಂಗಳೂರು-560 0016. ಮತ್ತು ಇತರರು (ರಿಟ್ ಪಿಟಿಷನ್ ಸಂ.49635/2013(ಇಡಿಎನ್-ಆರ್‌ಇಎಸ್-ಪಿಐಎಲ್).

ಮಾನ್ಯರೇ,

ವಿಷಯ: ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸುಗಳ ಕ್ಯಾರಿ ಓವರ್ ನಿಯಮಾವಳಿಗಳ ಬಗ್ಗೆ.

ಉಲ್ಲೇಖ:
1. ರಿಟ್ ಪಿಟಿಷನ್ ಸಂಖ್ಯೆ:32330-32437/2012 ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇದರ ಏಕ ಸದಸ್ಯ ಪೀಠದ ತೀರ್ಪು, ದಿನಾಂಕ:10-09-2012.
2. ರಿಟ್ ಅಪೀಲ್ ಸಂಖ್ಯೆ: 31203/2012 ಮಾನ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಇದರ ದ್ವಿ ಸದಸ್ಯ ಪೀಠದ ತೀರ್ಪು. ದಿನಾಂಕ 6-12-2012.
3. ಶ್ರೀ ಪ್ರಭಾಕರನ್ ಕೆ, s/o ಕನಕರಾಜ್, ಮತ್ತು ಇತರರು (ರಿಟ್ ಪಿಟಿಷನ್ ಸಂ.49635/2013(ಇಡಿಎನ್-ಆರ್‌ಇಎಸ್-ಪಿಐಎಲ್). ದಿನಾಂಕ: 07/12/2013 ರಂದು ಸಲ್ಲಿಸಿದ ಮನವಿ.
4. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: 49635/2013, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು. ದಿನಾಂಕ: 22-11-2013.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(4) ರಲ್ಲಿ, ಡಿಪ್ಲೊಮಾ ವ್ಯಾಸಂಗದಲ್ಲಿ ಈಗಿರುವ ಕ್ಯಾರಿಓವರ್ ನಿಯಮವನ್ನು ಸಡಿಲಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: 49635/2013ಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 22-11-2013 ರಂದು ಅರ್ಜಿಯನ್ನು ವಜಾಗೊಳಿಸಿದ್ದು, ಫಿರ್ಯಾದುದಾರರು ಉಲ್ಲೇಖ (3) ರಲ್ಲಿ ಸಲ್ಲಿಸಿದ ಮನವಿಗೆ ಈ ಕೆಳಗಿನಂತೆ ಹಿಂಬರಹ ನೀಡಲಾಗಿದೆ.

ಡಿಪ್ಲೊಮಾ ವ್ಯಾಸಂಗದಲ್ಲಿ ಈಗಿರುವ ಕ್ಯಾರಿಓವರ್ ನಿಯಮವನ್ನು ಪಾಲಿಸುವುದು ಕಡ್ಡಾಯ ಮತ್ತು ನಾಲ್ಕಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣರಾದವರಿಗೆ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ನೀಡಿಕೆ ಸಾದುವಲ್ಲ ಎಂದು ಉಲ್ಲೇಖ(೧),(೨) ರಲ್ಲಿನ ಮಾನ್ಯ ಉಚ್ಚ ನ್ಯಾಯಾಲಯದ ಏಕ ಸದಸ್ಯ ಹಾಗು ದ್ವಿ ಸದಸ್ಯ ಪೀಠದ ತೀರ್ಪು ಮತ್ತು ರಾಜ್ಯದ ಅಡ್ವೋಕೇಟ್ ಜನರಲ್‌ರವರು ಅಭಿಪ್ರಾಯ ನೀಡಿರುತ್ತಾರೆ.

ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಸಂಘಟನೆಗಳು ಡಿಪ್ಲೊಮಾ ಕ್ಯಾರಿಓವರ್ ನಿಯಮಾವಳಿಗಳ ಸಡಿಲಿಕೆ ಬಗ್ಗೆ ಈಗಾಗಲೇ ಮನವಿಗಳನ್ನು ನೀಡಿದ್ದು, ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯದ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೇಳಲಾಯಿತು. ಆದರೆ ನ್ಯಾಯಾಲಯದ ತೀರ್ಪನ್ನೇ ಪಾಲಿಸುವುದು ಕಡ್ಡಾಯ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದರಿಂದ ಇದಕ್ಕೆ ವ್ಯತಿರಿಕ್ತವಾದ ಯಾವುದೇ ಕ್ರಮ ಯಾರೇ ಕೈಗೊಂಡರೂ ಸಹ ಅದು ನ್ಯಾಯಾಲಯ ನಿಂದನೆ ಆಗುತ್ತದೆ. ಆದ್ದರಿಂದ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ನೀಡುವ ನಿಯಮಾವಳಿಗಳು ಊರ್ಜಿತವಾಗಿರುತ್ತದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಈ ಡಿಪ್ಲೊಮಾ ಕ್ಯಾರಿಓವರ್ ನಿಯಮಾವಳಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರವೇಶ ಪೂರ್ವದಲ್ಲಿಯೇ ಹಾಗೂ ಸೆಮಿಸ್ಟರ್ ತರಗತಿಗಳು ಪ್ರಾರಂಭಗೊಳ್ಳುವ ಮುನ್ನವೇ ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಸುತ್ತೋಲೆಯ ಮೂಲಕ ಪ್ರಕಟಿಸಿ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಮನವರಿಕೆ ಮಾಡಿಕೊಡಲಾಗಿದೆ. 2013-14 ನೇ ಶೈಕ್ಷಣಿಕ ಸಾಲಿನ 3 ಮತ್ತು 5ನೇ ಸೆಮಿಸ್ಟರ್ ತರಗತಿಗಳು

ಈಗಾಗಲೇ ಮುಕ್ತಾಯಗೊಂಡಿದ್ದು, ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳು ಸಹಾ ದಿ: 07-12-2013 ರಂದು ಕೊನೆಗೊಂಡಿರುತ್ತದೆ. ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿರುವ ವಿಷಯಗಳಲ್ಲಿ ಹೆಚ್ಚಿನ ಅಧ್ಯಯನ ಮಾಡಿ ಮುಂಬರುವ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, 2014-15ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರದ ಆದೇಶ ಸಂ.ಇಡಿ 178 ಟಿಪಿಇ 2009. ದಿ:01-08-2009 ರ ಅನುಭಂದದಲ್ಲಿ ತಿಳಿಸಿರುವ " Regulations and Guidelines for Diploma courses as per the curriculum-C-09/10" ರ ನಿಯಮಾವಳಿಗಳ ಪ್ರಕಾರ ಪ್ರವೇಶ ಪಡೆಯಬಹುದಾಗಿದೆ.

ಅದ್ದರಿಂದ ವಿದ್ಯಾರ್ಥಿಗಳು ಮಾನ್ಯ ನ್ಯಾಯಾಲಯದ ತೀರ್ಪುಗಳ ಅದೇಶ ಹಾಗು ನಿಯಮಾವಳಿಗಳನ್ನು ಶೈಕ್ಷಣಿಕ ದೃಷ್ಟಿಯಿಂದ ಅರ್ಥಮಾಡಿಕೊಂಡು, ಪರೀಕ್ಷೆಗಳಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಉತ್ತೀರ್ಣರಾಗಿ, ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ನಿರ್ದೇಶಕರು

ಪ್ರತಿ:

1. ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಅಡ್ವೋಕೇಟ್ ಜನರಲ್‌ರವರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ(ಉನ್ನತ ಶಿಕ್ಷಣ) ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
5. Sri. G M Srinivasa, Petitioner's Advocate in WP No.49635/2013, G Floor, No. 30, 5th Main road, Opp: Volga Hotel, Adigas Hotel Backside, Bangalore-560009 – For information and needful.
6. ಇ-ಗೌರ್ನೆನ್ಸ್ ವಿಭಾಗ- ವೆಬ್‌ಸೈಟ್‌ನಲ್ಲಿ ಪ್ರಕಟಿಸಲು